# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 251/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ನಾಗೇಶ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹದೇವಪ್ಪ | | **31.08.2024** |
| **ವಯಸ್ಸು** | ಃ **34** **ವರ್ಷ** | | |
| **ವೃತ್ತಿ** | ಃ ಅಬಕಾರಿ ಇಲಾಖೆ ಕಾನ್ಸ್ ಟೇಬಲ್ | **ಪ್ರಾ.ಸಾ.** ಃ **21** | |
| **ವಾಸಸ್ಥಳ** | ಃ ಬೆಂಗಳೂರು | **ಚಾ.ಸಾ.** ಃ **28** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನ್ನ ಸ್ವಂತ ಊರು ಗೌಡರಹುಂಡಿ ಗ್ರಾಮ ಇದೆ. *2021* ರಲ್ಲಿ ನಾನು ಗೌಡರಹುಂಡಿಯಲ್ಲೇ ವಾಸವಿದ್ದೆ. ಗೌಡರಹುಂಡಿ ಗ್ರಾಮದ ಶಿವರಾಜಪ್ಪನ ಮಗನಾದ ಪವನ್ ಕುಮಾರ್ ಇವರ ಪರಿಚಯ ಇದೆ. *2021* ರ ಮೇ ತಿಂಗಳ ಕೊನೆಯಲ್ಲಿ ನಮ್ಮ ಗ್ರಾಮದ ಶಿವರಾಜಪ್ಪ ಇವರು ಕಾಣೆಯಾಗಿದ್ದರು ಆ ಕಾಲಕ್ಕೆ ದಿಃ*02.06.2021* ರಂದು ಶಿವರಾಜಪ್ಪನ ಶವ ರಾಮಪುರ ನಾಲೆಯಲ್ಲಿ ದೊರೆತಿದ್ದು ಆ ಕಾಲಕ್ಕೆ ಪವನ್ ಕುಮಾರ್ ಮತ್ತು ಅವರ ಚಿಕ್ಕಪ್ಪನ ವಿನಂತಿ ಮೇರೆಗೆ ಅವರು ಹೇಳಿದಂತೆ ದೂರನ್ನು ಬರೆದುಕೊಟ್ಟಿದ್ದಾರೆ. ಆ ನಂತರ ಶರತ್ ಕುಮಾರ್ ಇವರನ್ನು ಮಹಜರ್ ಮಾಡಲು ಊರಿಗೆ ಕರೆದುಕೊಂಡು ಬಂದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*2* ದೂರು ನಾನು ಬರೆದುಕೊಟ್ಟ ದೂರು ಇದೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ-*2(ಬಿ)* ಎಂದು ಗುರುತಿಸಿದೆ. ನಾನು ಶವ ದೊರೆತ ಸ್ಥಳಕ್ಕೆ ಹೋಗಿಲ್ಲ

ಮತ್ತು ಯಾವ ಕಾರಣಕ್ಕೆ ಶಿವರಾಜಪ್ಪ ಮರಣಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

***2.*** ಶಿವರಾಜಪ್ಪನ ಮಗ ಪವನ್ ಕುಮಾರ ಮತ್ತು ಮಲ್ಲಿಗಮ್ಮನ ಮಗಳು ಪ್ರೀತಿ ಇವರ ಮದುವೆಯನ್ನು ತಪ್ಪಿಸುವ ಸಲುವಾಗಿ ಶರತ್ ಕುಮಾರ ಮತ್ತು ಮಲ್ಲಿಗಮ್ಮ ಸಂಚು ಮಾಡಿ ಆ ಸಂಚಿನಂತೆ ಶರತ್ ಕುಮಾರ್ ಶಿವರಾಜಪ್ಪನನ್ನು ಗೌರಮ್ಮನ ಮನೆಯಿಂದ ತನ್ನ ಬೈಕ್ ನಲ್ಲಿ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದಾನೆ ಮತ್ತು ಶರತ್ ಕುಮಾರ್ ಮತ್ತು ***3*** ನೇ ಆರೋಪಿತ ಮದು ಸೇರಿ ಶಿವರಾಜಪ್ಪನ ಶವವನ್ನು ರಾಮಪುರ ನಾಲೆಗೆ ಬಿಸಾಡಿದ್ದಾರೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಪವನ್ ಕುಮಾರ ಇವರು ದೂರು ಬರೆಯುವ ಕಾಲಕ್ಕೆ ಶಿವರಾಜಪ್ಪ ಕಾಣೆಯಾಗಲು ಶರತ್ ಕುಮಾರ ಇವರೇ ಕಾರಣ ಎಂದು ಹೇಳಿದ್ದ. ಅವರು ಹೇಳಿದಂತೆ ದೂರು ಬರೆದಿದ್ದೇನೆ. ಈ ಕುರಿತು ನನ್ನ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–***50*** ಎಂದು ಗುರುತಿಸಿದೆ.

ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಆರ್ ರವರಿಂದಃ-

***3.*** ಪವನ್ ಕುಮಾರ್ ಮತ್ತು ನಾನು ಸ್ನೇಹಿತರು ಎಂದರೆ ನಿಜ. ಪವನ್ ಕುಮಾರ ಹೇಳಿದಂತೆ ನಾನು ದೂರನ್ನು ಬರೆದಿದ್ದೇನೆ. ಪವನ್ ಕುಮಾರ್ ಹೇಳಿದ ವಿಚಾರ ಬಿಟುಟ ನನಗೆ ಬೇರೆ ವಿಚಾರ ಗೊತ್ತಿಲ್ಲ ಎಂದರೆ ನಿಜ.

***2 ಮತು 3 ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು